**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)**
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು–570017
Telephone No: 0821–234338

**CHAMUNDESHWARI ELECTRICITY SUPPLY CORPORATION LIMITED**
***(A Government of Karnataka Undertaking)***
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org

Company Identity Number[CIN]:- **U40109KA2004SGC035177**

ಕ್ರಮಾಂಕ: CESC/AHR/TRN/16/2022-TRNG-Part(1)/ cys-106 ದಿನಾಂಕ: 18 APR 2023

**"ಅಧಿಕೃತ ಜ್ಞಾಪನ"**

**ವಿಷಯ:** ಚಾವಿಸನಿನಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಹಾಯಕ ರವರುಗಳನ್ನು ಉದ್ಯೋಗ ಪೂರ್ವ ತರಬೇತಿಗಾಗಿ (Offline) ನಿಯೋಜಿಸುವ ಬಗ್ಗೆ (ತಂಡ–2).

**ಉಲ್ಲೇಖ:**
1. ಚಾವಿಸನಿನಿ ಮತ್ತು KEBEA ರವರ ನಡುವೆ ಆಗಿರುವ MoU ಒಪ್ಪಂದ ದಿನಾಂಕ : 17.03.2020.
2. ದಿನಾಂಕ : 30.04.2022ರಂದು ನಡೆದ 93ನೇ ಮಂಡಳಿ ಸಭೆಯ ಸಭಾ ನಡವಳಿ (BM:93/22).
3. ಈ ಕಛೇರಿ ಪತ್ರ ಸಂಖ್ಯೆ: ಸೆಸ್ಕ್/ತರಬೇತಿ/01/05/2022–23/CYS-948 ದಿನಾಂಕ: 14.09.2022.
4. ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ವೃತ್ತ ಕಛೇರಿರವರ ಪತ್ರ ಸಂಖ್ಯೆ: ಅಇಂ(ವಿ)/ಉಲೆನಿ/ಲೆಅ/ಹಿಸ(ಸಿ)/ಸಿಸ–1/2022–23 CYS 161 ದಿನಾಂಕ: 19.10.2022./ Confirmation E-mail Dtd : 12.04.2023.
5. ಅಧೀಕ್ಷಕ ಇಂಜಿನಿಯರ್(ವಿ), ಚಾಮರಾಜ ನಗರ – ಕೊಡಗು ವೃತ್ತ ಕಛೇರಿರವರ ಪತ್ರ ಸಂಖ್ಯೆ:– ಅಇಂ(ವಿ)/ಉಲೆನಿ/ಲೆಅ/ಸಿಸ(ಸಾ)/ಕ–9/2022–23/4569–72 ದಿನಾಂಕ: 16.11.2022./ Confirmation E-mail Dtd : 11.04.2023.
6. ಉಪ ಲೆಕ್ಕ ನಿಯಂತ್ರಣಾಧಿಕಾರಿ, ಮೈಸೂರು ವೃತ್ತ ರವರ ಇ–ಮೇಲ್ ದಿನಾಂಕ: 25.11.2022./ Confirmation E-mail Dtd : 11.04.2023.
7. ಅಧೀಕ್ಷಕ ಇಂಜಿನಿಯರ್(ವಿ), ಹಾಸನ ವೃತ್ತ ಕಛೇರಿರವರ ಪತ್ರ ಸಂಖ್ಯೆ: ಅಇಂ(ವಿ)/ಉಲೆನಿ/ಲೆಅ/ಹಿಸ/2022–23/1067 ದಿನಾಂಕ : 29.11.2022./ Confirmation E-mail Dtd : 12.04.2023.

************

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವಿವಿಧ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಹುದ್ದೆಯ ನೌಕರರುಗಳು ಕ.ವಿ.ಮಂ ನೌಕರರ ನೇಮಕಾತಿ ಮತ್ತು ಬಡ್ತಿ ನಿಯಮಗಳ ಅನುಸಾರ ಉದ್ಯೋಗ ಪೂರ್ವ ತರಬೇತಿಯನ್ನು ಕಡ್ಡಾಯವಾಗಿ ಪೂರ್ಣಗೊಳಿಸಬೇಕಾಗಿರುವುದರಿಂದ, ಸದರಿ ಸಿಬ್ಬಂದಿಗಳಿಗೆ 42 ಕೆಲಸದ ದಿನಗಳ ಉದ್ಯೋಗ ಪೂರ್ವ ತರಬೇತಿಯನ್ನು KEBEA ರವರ ಸಹಯೋಗದೊಂದಿಗೆ **KEBEA ತರಬೇತಿ ಕೇಂದ್ರ, ಕಡಕೊಳ, ಮೈಸೂರಿನಲ್ಲಿ ದಿನಾಂಕ 24.04.2023 ರಿಂದ ದಿನಾಂಕ: 13.06.2023** ವರೆಗೆ (42 ಕೆಲಸದ ದಿನಗಳು) ನಡೆಸಲಾಗುವುದು. ಸದರಿ ಉದ್ಯೋಗ ಪೂರ್ವ ತರಬೇತಿಗೆ ಈ ಕೆಳಕಂಡ ಸಹಾಯಕರುಗಳನ್ನು ನಿಯೋಜಿಸಲಾಗಿದೆ.

| ಮೈಸೂರು ವೃತ್ತ | | | | |
|---|---|---|---|---|
| ಕ್ರ.ಸಂ | ನೌಕರರ ಹೆಸರು | ಪದನಾಮ | ಕಾರ್ಯ ಸ್ಥಾನ | ಮೊಬೈಲ್ ಸಂಖ್ಯೆ |
| 1 | ಕೆ. ಚೇತನ | ಸಹಾಯಕ | ಹೆಚ್.ಡಿ. ಕೋಟೆ ಕಂದಾಯ ಶಾಖೆ | 9538983508 |
| 2 | ಮೋನಿಕ .ಸಿ | ಸಹಾಯಕಿ | ಕಾ ಮತ್ತು ಪಾ ನಂಜನಗೂಡು ವಿಭಾಗ | 7090014810 |
| 3 | ಹರಿಣಾಕ್ಷಿ | ಸಹಾಯಕಿ | ಕೆ.ಆರ್ ನಗರ ವಿಭಾಗ | 7982292534 |
| 4 | ಮೋಹನ್‌ಕುಮಾರ್ .ಜಿ | ಸಹಾಯಕ | ಪಿರಿಯಾಪಟ್ಟಣ ಉಪ ವಿಭಾಗ | 6361610728 |
| 5 | ರೋಹಿತ್ .ವಿ | ಸಹಾಯಕ | ಕಾ ಮತ್ತು ಪಾ ನಂಜನಗೂಡು ವಿಭಾಗ | 8073373761 |
| 6 | ಶಶಿಕಲಾ | ಸಹಾಯಕಿ | ಕಾ ಮತ್ತು ಪಾ ನಂಜನಗೂಡು ವಿಭಾಗ | 6361472047 |
| ಚಾಮರಾಜನಗರ-ಕೊಡಗು ವೃತ್ತ | | | | |
| ಕ್ರ.ಸಂ | ನೌಕರರ ಹೆಸರು | ಪದನಾಮ | ಕಾರ್ಯ ಸ್ಥಾನ | ಮೊಬೈಲ್ ಸಂಖ್ಯೆ |
| 7 | ನಾಗೇಂದ್ರ .ಆರ್. | ಸಹಾಯಕ | ಗುಂಡ್ಲುಪೇಟೆ ಉಪ ವಿಭಾಗ | 9964488206 |
| 8 | ಆರ್. ನಂದಿನಿ | ಸಹಾಯಕಿ | ಚಾಮರಾಜನಗರ-ಕೊಡಗು ವೃತ್ತ ಕಛೇರಿ, ಮೈಸೂರು | 9343464226 |
| ಮಂಡ್ಯ ವೃತ್ತ | | | | |
| ಕ್ರ.ಸಂ | ನೌಕರರ ಹೆಸರು | ಪದನಾಮ | ಕಾರ್ಯ ಸ್ಥಾನ | ಮೊಬೈಲ್ ಸಂಖ್ಯೆ |
| 9 | ಅವಿನಾಶ್. ಕೆ | ಸಹಾಯಕ | ವಿಭಾಗೀಯ ಕಛೇರಿ ಪಾಂಡವಪುರ. | 8762991927 |
| 10 | ಚನ್ನಬಸಣ್ಣ. ಎಂ | ಸಹಾಯಕ | ಉಪ ವಿಭಾಗ-1 ಕೆ.ಆರ್. ಪೇಟೆ | 7019323967 |
| 11 | ಶಿಲ್ಪ. ಬಿ | ಸಹಾಯಕ | ಗ್ರಾಮಾಂತರ ಉಪವಿಭಾಗ, ಮದ್ದೂರು | 7899607921 |
| 12 | ರಾಜಸಿಂಹ. ಕೆ | ಸಹಾಯಕ | ಉಪ ವಿಭಾಗ ನಾಗಮಂಗಲ | 8971644140 |
| 13 | ಶಾಂತಾಲ ಪಿ.ಸಿ | ಸಹಾಯಕಿ | ಉಪವಿಭಾಗ ಶ್ರೀರಂಗಪಟ್ಟಣ | 8310882855 |
| ಹಾಸನ ವೃತ್ತ | | | | |
| ಕ್ರ.ಸಂ | ನೌಕರರ ಹೆಸರು | ಪದನಾಮ | ಕಾರ್ಯ ಸ್ಥಾನ | ಮೊಬೈಲ್ ಸಂಖ್ಯೆ |
| 14 | ರಮ್ಯ ವೈ.ಜೆ | ಸಹಾಯಕ | ವಿಭಾಗ ಕಛೇರಿ, ಅರಸೀಕೆರೆ | 6364298625 |
| 15 | ಡಿ.ಎ. ಜಗದೀಶ್ | ಸಹಾಯಕ | ಹಿರೀಸಾವೆ ಶಾಖೆ | 7676779938 |
| 16 | ಬಿ.ಕೆ.ವಾಸು | ಸಹಾಯಕ | ದುದ್ದ ಉಪವಿಭಾಗ, ಹಾಸನ | 9686311935 |
| 17 | ಕೆ. ಪುಷ್ಪ | ಸಹಾಯಕಿ | ಚನ್ನರಾಯಪಟ್ಟಣ ಉಪ ವಿಭಾಗ | 9353768283 |
| 18 | ಹೆಚ್.ಇ. ಚೈತ್ರಶ್ರೀ | ಸಹಾಯಕಿ | ಸಂತೇಪೇಟೆ ಶಾಖೆ, ನಗರ ಉಪವಿಭಾಗ, ಹಾಸನ | 8088028220 |
| 19 | ಆಶಾರಾಣಿ.ಬಿ.ಎಸ್. | ಸಹಾಯಕಿ | ವೃತ್ತ ಕಛೇರಿ, ಹಾಸನ | 9663764705 |

**ವಿಶೇಷ ಸೂಚನೆ :**

1. ಮೇಲ್ಕಂಡ ಸಿಬ್ಬಂದಿಗಳನ್ನು ಉಲ್ಲೇಖ (4), (5), (6) ಮತ್ತು (7) ರಲ್ಲಿ ವೃತ್ತ ಕಛೇರಿಗಳಿಂದ ಈ ಕಛೇರಿಗೆ ಸಲ್ಲಿಸಿರುವ ಮಾಹಿತಿ ಮೇರೆಗೆ ಉದ್ಯೋಗಪೂರ್ವ ತರಬೇತಿಗೆ ನಿಯೋಜಿಸಲಾಗಿರುತ್ತದೆ. ಮೇಲಿನ ಕೋಷ್ಟಕದಲ್ಲಿ ನಮೂದಿಸಿರುವ ನೌಕರರನ್ನು ಹೊರತುಪಡಿಸಿ, ಉದ್ಯೋಗಪೂರ್ವ ತರಬೇತಿಯನ್ನು ಪಡೆಯಲು ಬಿಟ್ಟು ಹೋಗಿರುವ ಯಾರಾದರೂ ಅರ್ಹ ನೌಕರರು ಇದ್ದಲ್ಲಿ ಅವರನ್ನು ಸಂಬಂಧಪಟ್ಟ ಅಧಿಕಾರಿಗಳು ತರಬೇತಿ ಶಾಖೆಯ ಗಮನಕ್ಕೆ ತಂದು ಈ ತರಬೇತಿಗೆ ಕಳುಹಿಸಬಹುದಾಗಿರುತ್ತದೆ.
2. ಮೇಲೆ ನಿಯೋಜಿಸಿರುವ ಅಭ್ಯರ್ಥಿಗಳ ಪೈಕಿ ಯಾರನ್ನಾದರೂ ವಿಧಾನಸಭಾ ಚುನಾವಣೆ - 2023ರ ಕರ್ತವ್ಯಕ್ಕೆ ಸರ್ಕಾರದಿಂದ ನಿಯೋಜಿಸಲಾದಲ್ಲಿ, ಸದರಿಯವರು KEBEA ತರಬೇತಿ ಕೇಂದ್ರ, ಕಡಕೊಳ, ರವರ ಮುಖೇನ ಕೂಡಲೇ ತರಬೇತಿ ಶಾಖೆಯ ಗಮನಕ್ಕೆ ತಂದು ನಿಯಮಾನುಸಾರ ಚುನಾವಣಾ ಕರ್ತವ್ಯಕ್ಕೆ ಕಡ್ಡಾಯವಾಗಿ ಹಾಜರಾಗುವಂತೆ ಸೂಚಿಸಿದೆ.

**ತರಬೇತಿ ಅವಧಿಯಲ್ಲಿ ಈ ಕೆಳಕಂಡ ಷರತ್ತುಗಳು ಹಾಗೂ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು :**

1) ಎಲ್ಲಾ ಸಂಬಂಧಪಟ್ಟ ಕಚೇರಿಯ ಮುಖ್ಯಸ್ಥರು, ನೌಕರರನ್ನು (ಶಿಕ್ಷಣಾರ್ಥಿಗಳನ್ನು) **ದಿನಾಂಕ 21.04.2023ರ ಶುಕ್ರವಾರದಂದು** ಅಪರಾಹ್ನ ಕರ್ತವ್ಯದಿಂದ ಕಾರ್ಯವಿಮುಕ್ತಿಗೊಳಿಸಿ, ಸದರಿ ತರಬೇತಿಯ ಅವಧಿ ಮುಗಿದ ನಂತರ ನಿಯಮಾನುಸಾರ ಕರ್ತವ್ಯಕ್ಕೆ ಹಾಜರಾಗಲು ಸೂಚಿಸತಕ್ಕದ್ದು.
2) ತರಬೇತಿ ಅವಧಿಯಲ್ಲಿ ಕಚೇರಿಯ ಯಾವುದೇ ಕೆಲಸ ಕಾರ್ಯಗಳನ್ನು ಮಾಡುವಂತೆ ಶಿಕ್ಷಣಾರ್ಥಿಗಳಿಗೆ ಕಚೇರಿಯ ಮುಖ್ಯಸ್ಥರು ಸೂಚಿಸುವಂತಿಲ್ಲ.
3) ಕಚೇರಿಯ ಮುಖ್ಯಸ್ಥರು ಶಿಕ್ಷಣಾರ್ಥಿಗಳಿಗೆ ತರಬೇತಿಯ ಪ್ರಾರಂಭದಿಂದ ಅಂತ್ಯದವರೆಗೆ ಯಾವುದೇ ರಜೆ ನೀಡತಕ್ಕದಲ್ಲ.
4) ತರಬೇತಿಗೆ ನಿಯೋಜಿಸಲ್ಪಟ್ಟ ನೌಕರರು ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳಲ್ಲಿ ಒಂದನ್ನು ಕಾರ್ಯವಿಮುಕ್ತ ಪತ್ರದ ಬಲಭಾಗದಲ್ಲಿ ಅಂಟಿಸಿ ಕಚೇರಿ ಮುಖ್ಯಸ್ಥರ ಸಹಿ ಮತ್ತು ಮೊಹರುಗಳೊಂದಿಗೆ KEBEA ತರಬೇತಿ ಕೇಂದ್ರದಲ್ಲಿ ನೋಂದಾಯಿಸಿಕೊಳ್ಳುವಾಗ ಹಾಜರುಪಡಿಸಬೇಕು.
5) ಶಿಕ್ಷಣಾರ್ಥಿಗಳು **ದಿನಾಂಕ: 24.04.2023ರ ಸೋಮವಾರ, ಬೆಳಿಗ್ಗೆ 09.30 ಗಂಟೆಗೆ** ತರಬೇತಿ ಕೇಂದ್ರದಲ್ಲಿ, ತರಬೇತಿಗಾಗಿ ವರದಿ ಮಾಡಿಕೊಳ್ಳತಕ್ಕದ್ದು.
6) ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳು ಯಾವುದೇ ರೀತಿಯ ರಜೆಗಳನ್ನು ಪಡೆಯಲು ಅವಕಾಶವಿರುವುದಿಲ್ಲ.
7) ತರಬೇತಿಯ ಅವಧಿಯಲ್ಲಿ ಗೈರು ಹಾಜರಾಗುವ ಅಭ್ಯರ್ಥಿಗಳ ವಿರುದ್ಧ ನೌಕರರ ಶಿಸ್ತು ನಿಬಂಧನೆಯ ಅನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.
8) ತರಬೇತಿ ಕೇಂದ್ರದಲ್ಲಿ ವಸತಿ ಹಾಗೂ ಊಟದ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ತರಬೇತಿ ಅವಧಿಯಲ್ಲಿ ಪ್ರತೀ ಅಭ್ಯರ್ಥಿಯು ಕಡ್ಡಾಯವಾಗಿ ತರಬೇತಿ ಕೇಂದ್ರದಲ್ಲಿಯೇ ವಾಸ್ತವ್ಯ ಹೂಡಬೇಕೆಂದು ಕಟ್ಟುನಿಟ್ಟಾಗಿ ಸೂಚಿಸಿದೆ ಹಾಗೂ ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ತರಬೇತಿ ಕೇಂದ್ರದಿಂದ ಹೊರಗಡೆ ಹೋಗಲು ಅವಕಾಶವಿರುವುದಿಲ್ಲ.
9) ಶಿಕ್ಷಣಾರ್ಥಿಗಳ ಕುಟುಂಬ ಸದಸ್ಯರು, ಮಕ್ಕಳು, ಅತಿಥಿಗಳು ಮತ್ತು ಇತರೆ ಯಾರಿಗೂ ತರಬೇತಿ ಕೇಂದ್ರದಲ್ಲಿ ತಂಗಲು ಅಥವಾ ಕೇಂದ್ರದ ಒಳಗಡೆ ಪ್ರವೇಶಿಸಲು ಅವಕಾಶವಿರುವುದಿಲ್ಲ.
10) ಔಷದೋಪಚಾರ (Under Medication)ದಲ್ಲಿರುವ ಶಿಕ್ಷಣಾರ್ಥಿಗಳು ಅವಶ್ಯಕ ಔಷಧಿಗಳನ್ನು ತಪ್ಪದೇ ತರುವುದು.
11) ತಂಬಾಕು, ಮದ್ಯಪಾನ ಮತ್ತು ಧೂಮಪಾನ ಸೇವನೆಯನ್ನು ತರಬೇತಿ ಕೇಂದ್ರದಲ್ಲಿ ಮತ್ತು ಅತಿಥಿ ಗೃಹದಲ್ಲಿ ನಿಷೇಧಿಸಿದೆ.
12) ಶಿಕ್ಷಣಾರ್ಥಿಗಳು ಸಾಂಪ್ರದಾಯಿಕ ಉಡುಗೆ (Formal Dress) ಯಲ್ಲಿ ಇರತಕ್ಕದ್ದು.
13) ಶಿಕ್ಷಣಾರ್ಥಿಗಳು ತರಗತಿ ಸಮಯದಲ್ಲಿ ಮೊಬೈಲ್‌ಗಳನ್ನು ಬಳಸುವಂತಿಲ್ಲ.
14) **ಎರಡನೇ ಮತ್ತು ನಾಲ್ಕನೇ ಶನಿವಾರ ದಿನಗಳಂದು ತರಬೇತಿ ನಡೆಸಲಾಗುವುದು, ದಿನಾಂಕ : 10.05.2023ರಂದು ಕರ್ನಾಟಕ ವಿಧಾನಸಭಾ ಚುನಾವಣೆ ನಡೆಯಲಿರುವುದರಿಂದ ಮತದಾನ ಮಾಡುವ ಸಲುವಾಗಿ ತರಬೇತಿಗೆ ರಜೆಯನ್ನು ನೀಡಲಾಗಿರುತ್ತದೆ.**
15) ಯಾವುದೇ ಸಮಸ್ಯೆ ಉಂಟಾದಲ್ಲಿ ಶಿಕ್ಷಣಾರ್ಥಿಗಳು ತರಬೇತಿಯ ಸಮನ್ವಯಧಿಕಾರಿಗಳ ಗಮನಕ್ಕೆ ತರತಕ್ಕದ್ದು.
16) ಶಿಕ್ಷಣಾರ್ಥಿಗಳಿಗೆ ತರಬೇತಿಯ ಅಂತ್ಯದಲ್ಲಿ 100 ಅಂಕಗಳ 2 ಪರೀಕ್ಷೆಗಳನ್ನು ನಡೆಸಲಾಗುವುದು. ಪ್ರತಿ ಪರೀಕ್ಷೆಯಲ್ಲಿ ಕನಿಷ್ಠ ಶೇ.40 ಅಂಕಗಳಿಸಿದವರನ್ನು ಉತ್ತೀರ್ಣರಾಗಿರುವವರೆಂದು ಘೋಷಿಸಲಾಗುವುದು.
17) **ಶ್ರೀ ಚಿಕ್ಕಸಿದ್ದೇಗೌಡ** (ಕಾರ್ಯ ನಿರ್ವಾಹಕ ಇಂಜಿನಿಯರ್‌ರವರು, ಮೊಬೈಲ್ ಸಂಖ್ಯೆ : 9480844550)
**ಶ್ರೀ ಯೋಗೇಗೌಡ** (ನಿವೃತ್ತ ಅಧೀಕ್ಷಕ ಇಂಜಿನಿಯರ್‌ರವರು, ಮೊಬೈಲ್ ಸಂಖ್ಯೆ : 7259143705)
**ಶ್ರೀ ಚಂದ್ರಶೇಖರ್ .ಪಿ.** (ವ್ಯವಸ್ಥಾಪಕರು, ಟ್ರ್ಯಾಕ್‌ಲೀಡ್ ಶಾಖೆ, ಮೊಬೈಲ್ ಸಂಖ್ಯೆ : 9448994349)
**ಈ ತಂಡದ ಸಮನ್ವಯ ಅಧಿಕಾರಿಯಾಗಿರುತ್ತಾರೆ.**

| ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ ಅನುಮೋದಿಸಲ್ಪಟ್ಟಿದೆ. |
|---|

18/4/23

**ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ)**
**ಚಾವಿಸನಿನಿ, ಮೈಸೂರು.**

**ಪ್ರತಿಗಳು:**

- ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಮೈಸೂರು/ಹಾಸನ, ಚಾವಿಸನಿನಿ ರವರ ಅವಗಾಹನೆಗಾಗಿ.



ನೋಂದಾಯಿತ ಕಛೇರಿ: ನಿಗಮ ಕಾರ್ಯಾಲಯ, ನಂ. 29, ವಿಜಯನಗರ, 2ನೇ ಹಂತ, ಹಿನಕಲ್, ಮೈಸೂರು –570017
Registered Office: Corporate Office, # 29, Vijayanagara, 2nd Stage, Hinkal, Mysuru-570017

- ಮುಖ್ಯ ಪ್ರಧಾನ ವ್ಯವಸ್ಥಾಪಕರು (ಆಂ.ಪ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು ರವರ ಅವಗಾಹನೆಗಾಗಿ.
- ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಮೈಸೂರು/ಮಂಡ್ಯ/ಚಾಮರಾಜನಗರ–ಕೊಡಗು/ಹಾಸನ, ಚಾವಿಸನಿನಿ ಅವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)/ (ವಾಣಿಜ್ಯ)/ (ಖರೀದಿ)/ (ಯೋಜನೆ)/ (ಲೆಕ್ಕ & ಕಂದಾಯ), ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು ಅವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ವಿ.ವಿ.ಮೊಹಲ್ಲಾ/ ಎನ್.ಆರ್.ಮೊಹಲ್ಲಾ/ ಹುಣಸೂರು/ ಕೆ.ಆರ್.ನಗರ/ ನಂಜನಗೂಡು/ ಹಾಸನ/ ಅರಸೀಕೆರೆ/ ಚನ್ನರಾಯಪಟ್ಟಣ/ ಸಕಲೇಶಪುರ/ ಹೊಳೆನರಸೀಪುರ/ ಚಾಮರಾಜನಗರ/ ಕೊಳ್ಳೇಗಾಲ/ ಮಡಿಕೇರಿ/ ಮಂಡ್ಯ/ ಮದ್ದೂರು/ ಪಾಂಡವಪುರ/ ಕೆ.ಆರ್.ಪೇಟೆ/ ನಾಗಮಂಗಲ ಮೈಸೂರು, ಚಾವಿಸನಿನಿ, ಮೈಸೂರು ಅವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ವಲಯ ಕಾರ್ಯದರ್ಶಿಯವರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಇಂಜಿನಿಯರ್‌ಗಳ ಸಂಘ, ಕಡಕೊಳ, ಮೈಸೂರುರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
- ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರು/ನಿರ್ದೇಶಕರು(ತಾಂ)/ಮು.ಆ.ಅರವರ ಆಪ್ತ ಕಾರ್ಯದರ್ಶಿಯವರಿಗೆ ಅ.ಜ್ಞಾಪನಾ ಪತ್ರವನ್ನು ಕಳುಹಿಸುತ್ತಾ, ಸದರಿ ಪತ್ರವನ್ನು ಮಾನ್ಯ ವ್ಯ.ನಿ/ನಿ(ತಾಂ)/ಮು.ಆ.ಅ ರವರ ಗಮನಕ್ಕೆ ತರಲು ಕೋರಿದೆ.
- ಉಪ್ರವ್ಯ, MIS ಶಾಖೆ, ನಿಗಮ ಕಾರ್ಯಾಲಯ, ಮೈಸೂರು ಅವರ ಮಾಹಿತಿಗಾಗಿ ಹಾಗೂ ನಿಗಮದ Website ನಲ್ಲಿ (Upload) ಪ್ರಕಟಣೆಗಾಗಿ.
- ಉಪಾಧ್ಯಕ್ಷರು, ಕವಿಪ್ರನಿನಿ (659) ಎಂ.ಪಿ.ಎಲ್. ಆವರಣ ಶ್ರೀಹರ್ಷ ರಸ್ತೆ, ಮೈಸೂರು ರವರ ಮಾಹಿತಿಗಾಗಿ.
- ಸಂಬಂಧಿಸಿದ ನೌಕರರುಗಳಿಗೆ.
- ಸ/ಮು.ಕ